ಕರ್ನಾಟಕ ಸರ್ಕಾರ

ನೋಂದಣಿ ಮತ್ತು ಮುದ್ರಾಂಕ ಇಲಾಖೆ

ಸಂಖ್ಯೆ: Comp/ 09/03-04
ಅಡಕ:ಒಂದು

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ,
ಶಿಂಷಾ ಭವನ, ನಂ. 720, 8ನೇ ಬ್ಲಾಕ್,
46 ನೇ ಅಡ್ಡ ರಸ್ತೆ, ಸಂಗಮ್ ಸರ್ಕಲ್,
ಜಯನಗರ, ಬೆಂಗಳೂರು-82
ದಿನಾಂಕ:15-04-2008.

## ಸುತ್ತೋಲೆ ಸಂಖ್ಯೆ-16

ವಿಷಯ: ಕಾವೇರಿ ಹಾರ್ಡ್‌ವೇರ್ ನಿರ್ವಹಣೆಯ ಗುಣಮಟ್ಟ ಪರಿಶೀಲನೆ ಕುರಿತು.

ಉಲ್ಲೇಖ: ಮೆ|| ECIL ಮತ್ತು ಮೆ||CMS ಕಂಪ್ಯೂಟರ್ಸ್ ಲಿ. ರವರೊಂದಿಗೆ ಮಾಡಿಕೊಳ್ಳಲಾಗಿರುವ ನಿರ್ವಹಣಾ ಒಪ್ಪಂದದ ಕರಾರು ಪತ್ರ ದಿನಾಂಕ 30-06-2003.

******

ಕಾವೇರಿ ಗಣಕೀಕರಣದ ಯೋಜನೆಯನ್ನು ಮೆ|| ECIL ಹಾಗೂ ಮೆ||CMS ಕಂಪ್ಯೂಟರ್ಸ್ ಲಿ. ರವರ ಸಹಯೋಗದೊಂದಿಗೆ ರಾಜ್ಯಾದ್ಯಂತ ಎಲ್ಲಾ ಉಪ-ನೋಂದಣಿ/ಜಿಲ್ಲಾ ನೋಂದಣಿ ಕಛೇರಿಗಳಲ್ಲಿ 2003ನೇ ಸಾಲಿನಿಂದ ಏಕಕಾಲಕ್ಕೆ ಜಾರಿಗೆ ತರಲಾಗಿದೆ. ಕಾವೇರಿ ತಂತ್ರಾಂಶವನ್ನು ಮೆ||C-DAC ಪುಣೆರವರು ಅಭಿವೃದ್ಧಿಪಡಿಸಿ ನಿರ್ವಹಿಸುತ್ತಿರುವರು.

ಕಾವೇರಿ ಗಣಕೀಕರಣಕ್ಕೆ ಬೇಕಾಗಿರುವ ಕಂಪ್ಯೂಟರ್ ಸಿಸ್ಟಮ್, ಸ್ಕ್ಯಾನರ್,ಪ್ರಿಂಟರ್,ವೆಬ್‌ಕೆಮರಾ,ಥಂಬ್ ಸ್ಕ್ಯಾನರ್, ನಿತ್ಯೋಪಯೋಗಿ ಸಾಮಗ್ರಿಗಳು, ಆಪರೇಟರ್ , ನಿರ್ವಹಣಾ ಇಂಜಿನೀಯರವರ ಸೇವೆ ಇತ್ಯಾದಿ ಪೂರೈಸಿ ಕಾವೇರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಮೆ|| ECIL ಹಾಗೂ ಮೆ||CMS ಕಂಪ್ಯೂಟರ್ಸ್ ಲಿ.ರವರಿಗೆ ಮೇಲ್ಕಂಡ ಕರಾರು ಪತ್ರದಲ್ಲಿ ಒಪ್ಪಂದ ಮಾಡಿಕೊಳ್ಳಲಾಗಿದೆ. ಮೆ|| CMS ಕಂಪ್ಯೂಟರ್ಸ್ ಲಿ.ರವರು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ನಿರ್ವಹಣೆ ಕಾರ್ಯ ಕೈಕೊಂಡಿದ್ದು ಉಳಿದ ಜಿಲ್ಲೆಗಳಲ್ಲಿ ಮೆ||ECIL ರವರು ನಿರ್ವಹಣೆ ಕಾರ್ಯ ಕೈಕೊಂಡಿರುತ್ತಾರೆ.

ಸದರಿ ಒಪ್ಪಂದದ ಕರಾರುಗಳನ್ವಯ ಸರ್ವೀಸ್ ಪ್ರೊವೈಡರ್ ರವರು ಕಾರ್ಯ ನಿರ್ವಸುತ್ತಿರುವರೇ? ಇಲ್ಲವೇ ? ಎಂಬುವುದನ್ನು ಪರಿಶೀಲಿಸಬೇಕಾದದ್ದು ಆಯಾ ಉಪ-ನೋಂದಣಿ/ಜಿಲ್ಲಾ ನೋಂದಣಾಧಿಕಾರಿ ಯವರ ಕರ್ತವ್ಯವಾಗಿರುತ್ತದೆ. ಪರಿಶೀಲಿಸಬೇಕಾದ ಅಂಶಗಳ ಬಗ್ಗೆ ಲಗತ್ತಿಸಿರುವ ನಮೂನೆಯಲ್ಲಿ ಸ್ಪಷ್ಟಮಾಹಿತಿ ನೀಡಲಾಗಿದೆ.

ಸದರಿ ಪರಿಶೀಲನಾ ಅಂಶಗಳ ಎದುರು ಆಯಾ ಕಛೇರಿಯ ಮುಖ್ಯಸ್ಥರು ಸ್ಪಷ್ಟ ಅಭಿಪ್ರಾಯವನ್ನು ನಮೂದಿಸಿ ಸಹಿ ಮಾಡಿ ಕಛೇರಿ ಮುದ್ರೆ ಹಾಕಬೇಕು. ಹೀಗೆ ಅಭಿಪ್ರಾಯ ಸೂಚಿಸಿ ಸಹಿ ಮಾಡಲ್ಪಟ್ಟ ನಮೂನೆಗಳನ್ನು ಪ್ರತಿ ತಿಂಗಳು ಆಯಾ ಕಛೇರಿಯ ಸ್ಕ್ಯಾನಿಂಗ್ ವೆಚ್ಚದ ಬಿಲ್‌ಗಳೊಂದಿಗೆ ಲಗತ್ತಿಸಿ ಕೇಂದ್ರ ಕಛೇರಿಗೆ ಪ್ರತಿ ತಿಂಗಳು 10ನೇ ತಾರೀಖಿನೊಳಗಾಗಿ ತಪ್ಪದೇ ಕಳುಹಿಸುವುದು. ಸದರಿ ನಮೂನೆಗಳು ಲಗತ್ತಿಲ್ಲದ ಸ್ಕ್ಯಾನಿಂಗ್ ಶುಲ್ಕದ VMS ಬಿಲ್‌ಗಳನ್ನು ಪಾವತಿಗೆ ಪರಿಗಣಿಸಲಾಗುವುದಿಲ್ಲ.

ನೋಂದಣಿ ಮಹಾ ಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು,ಬೆಂಗಳೂರು.

ಇವರಿಗೆ:

1) ರಾಜ್ಯದ ಎಲ್ಲಾ ಉಪ-ನೋಂದಣಿ/ಜಿಲ್ಲಾ ನೋಂದಣಿ ಅಧಿಕಾರಿರವರಿಗೆ.
2) ಮೆ|| ECIL ಹಾಗೂ ಮೆ||CMS ಕಂಪ್ಯೂಟರ್ಸ್ ಲಿ.ರವರಿಗೆ ಮಾಹಿತಿಗಾಗಿ.
3) ಸಂಕಲನಕಾರರು ಕರ್ನಾಟಕ ರಾಜ್ಯ ಪತ್ರ- ಈ ಸುತ್ತೋಲೆಯನ್ನು ರಾಜ್ಯಪತ್ರದ ಮುಂದಿನ ಆವೃತ್ತಿಯಲ್ಲಿ ಪ್ರಕಟಪಡಿಸಿ 500 ಪ್ರತಿಗಳನ್ನು ನೀಡಲು ಕೋರಲಾಗಿದೆ.

..................... ನೇ ಸಾಲಿನ...................... ತಿಂಗಳಿಗೆ ಸಂಬಂಸಿದಂತೆ ಮೆ|| ECIL / CMS ರವರ ಸೇವಾ ನಿರ್ವಹಣೆಯ ಪರಿಶೀಲನಾ ವರದಿ.

ಉಪ-ನೋಂದಣಿ/ ಜಿಲ್ಲಾ ನೋಂದಣಿ ಕಛೇರಿಯ ಹೆಸರು....................................... ಜಿಲ್ಲೆ ........................

| ಕ್ರ ಸಂ | ಸೇವೆಗಳ ವಿವರ | ನಿರ್ವಹಣೆಯ ಗುಣಮಟ್ಟ | ಹೌದು/ಇಲ್ಲ/ ಸಂಖ್ಯೆ |
|---|---|---|---|
| 1 | ಕಂಪ್ಯೂಟರ್ (ಸರ್ವರ್ ಮತ್ತು ಕ್ಲಯಿಂಟ್) | ಸರಿಯಾಗಿ ಕಾರ್ಯ ನಿರ್ವಹಿಸುತ್ತಿದೆಯೇ ? | |
| 2 | ಪ್ರಿಂಟರ್ | 1.ಸರಿಯಾಗಿ ಕಾರ್ಯ ನಿರ್ವಹಿಸುತ್ತಿದೆಯೇ ? | |
| | | 2.ಪ್ರಿಂಟ ಸ್ಪಷ್ಟವಾಗಿದೆಯೇ ? | |
| 3 | ವೆಬ್ ಕ್ಯಾಮರಾ | 1.ಸರಿಯಾಗಿ ಕಾರ್ಯ ನಿರ್ವಹಿಸುತ್ತಿದೆಯೇ ? | |
| | | 2.ಚಿತ್ರ ಸ್ಪಷ್ಟವಾಗಿದೆಯೇ ? | |
| 4 | ಥಂಬ್ ಸ್ಕ್ಯಾನರ್ | 1.ಸರಿಯಾಗಿ ಕಾರ್ಯ ನಿರ್ವಹಿಸುತ್ತಿದೆಯೇ ? | |
| | | 2. ಚಿತ್ರ ಸ್ಪಷ್ಟವಾಗಿದೆಯೇ ? | |
| 5 | ಕಂಪ್ಯೂಟರ್ ಟೇಬಲ್ | ಸುಸ್ಥಿತಿಯಲ್ಲಿದೆಯೇ ? | |
| 6 | ಕಂಪ್ಯೂಟರ್ ಖುರ್ಚಿ | ಸುಸ್ಥಿತಿಯಲ್ಲಿದೆಯೇ ? | |
| 7 | ಅಧಿಕಾರಿಗಳ ಟೇಬಲ್ | ಸುಸ್ಥಿತಿಯಲ್ಲಿದೆಯೇ ? | |
| 8 | ಅಧಿಕಾರಿಗಳ ಖುರ್ಚಿ | ಸುಸ್ಥಿತಿಯಲ್ಲಿದೆಯೇ ? | |
| 9 | ಸ್ಕ್ಯಾನರ | 1. ಸರಿಯಾಗಿ ಕಾರ್ಯ ನಿರ್ವಹಿಸುತ್ತಿದೆಯೇ ? | |
| | | 2. ಛಾಯ ಪ್ರತಿಗಳು ಸ್ಪಷ್ಟ ಇರುವುವೇ ? | |
| 10 | ಪ್ರಿಂಟಿಂಗ್ ಟೋನರ್ ಪೂರೈಕೆ | ಸಮರ್ಪಕವಾಗಿದೆಯೇ ? | |
| 11 | ಪ್ರಿಂಟಿಂಗ್ ಪೇಪರ್ ಪೂರೈಕೆ | ಸಮರ್ಪಕವಾಗಿದೆಯೇ ? | |
| 12 | ಆಪರೇಟರ್‌ರವರ ಸೇವೆ | ಉತ್ತಮವಾಗಿದೆಯೇ ? | |
| 13 | ಇಂಜಿನೀಯರ್‌ಗಳ ಸೇವೆ | ಆಗಿಂದಾಗ್ಗೆ ಕಛೇರಿಗಳಿಗೆ ಬೇಟಿ ನೀಡಿ ಅಥವಾ ಕರೆದಾಗ ಬಂದು ಕಂಪ್ಯೂಟರ್ ಇತ್ಯಾದಿ ಉಪಕರಣಗಳನ್ನು ಪರಿಶೀಲಿಸಿ, ಸರ್ವೀಸ್ ಮಾಡುತ್ತಿರುವರೆ? | |
| 14 | ದಿನ ನಿತ್ಯದ ಬ್ಯಾಕ್ ಅಪ್ ತೆಗೆಯುವ ವಿಚಾರ | 1. ಪ್ರತಿ ನಿತ್ಯ ದಿನದ ಅಂತ್ಯಕ್ಕೆ ಬ್ಯಾಕ್ ಅಪ್ ಪಡೆಯಲಾಗುತ್ತಿದೆಯೇ ? | |
| | | 2.ಬ್ಯಾಕ್ ಅಪ್ ಪಡೆದ ಬಗ್ಗೆಪ್ರಿಂಟ್ ಪ್ರತಿಯನ್ನು ಕಡತದಲ್ಲಿ ರಿಸಲಾಗಿದೆಯೇ ? | |
| 15 | ಪೂರ್ಣ ಬ್ಯಾಕ್ ಅಪ್ ತೆಗೆಯುವ ವಿಚಾರ | 1.ಪ್ರತಿ ಮಂಗಳವಾರ ಪೂರ್ಣ ಬ್ಯಾಕ್ ಅಪ್ ತೆಗೆಯಲಾಗುತ್ತಿದೆಯೇ ? | |
| | | 2.ಬ್ಯಾಕ್ ಅಪ್ ಪಡೆದ ಬಗ್ಗೆಪ್ರಿಂಟ್ ಪ್ರತಿಯನ್ನು ಕಡತದಲ್ಲಿ ರಿಸಲಾಗಿದೆಯೇ ? | |
| 16 | UPS | ಸರಿಯಾಗಿ ಕಾರ್ಯ ನಿರ್ವಹಿಸುತ್ತಿದೆಯೇ ? | |
| 17 | ಜನರೇಟರ್ | ಸರಿಯಾಗಿ ಕಾರ್ಯ ನಿರ್ವಹಿಸುತ್ತಿದೆಯೇ ? | |
| 18 | ಕಾವೇರಿ ಸರ್ವಿಸ ಪ್ಯಾಚ್ | ಇತ್ತೀಚಿನ ಸರ್ವಿಸ ಪ್ಯಾಚ್ ಇನ್ ಸ್ಟಾಲ್ ಮಾಡಲಾಗಿದೆಯೇ? | |
| 19 | ಮಾರುಕಟ್ಟೆ ಮೌಲ್ಯದ ಸರ್ವಿಸಪ್ಯಾಚ್ | ಇತ್ತೀಚಿನ ಸರ್ವೀಸ್ ಪ್ಯಾಚ್ ಇನ್ ಸ್ಟಾಲ್ ಮಾಡಲಾಗಿದೆಯೇ? | |
| 20 | ಜೆ-ಫಾರ್ಮ್ ಸರ್ವಿಸ ಪ್ಯಾಚ್ | ಇತ್ತೀಚಿನ ಸರ್ವೀಸ್ ಪ್ಯಾಚ್ ಇನ್ ಸ್ಟಾಲ್ ಮಾಡಲಾಗಿದೆಯೇ? | |
| 21 | ತಪ್ಪಾಗಿ ಸ್ಕ್ಯಾನ್ ಮಾಡಿದ ಪ್ರಕರಣಗಳು | ಎಷ್ಟು ದಸ್ತಾವೇಜುಗಳಲ್ಲಿ ತಪ್ಪಾಗಿ ಸ್ಕ್ಯಾನ್ ಮಾಡಲಾಗಿದೆ? | |
| 22 | ದಸ್ತಾವೇಜು ನೋಂದಣಿ ಮಾಡುವಲ್ಲಿ ಅಪರೇಟರ್ ರವರಿಂದಾದ ಬೆರಳಚ್ಚು ತಪ್ಪುಗಳು | ಎಷ್ಟು ದಸ್ತಾವೇಜುಗಳಲ್ಲಿ ತಪ್ಪು ನಮೂದನೆ ಮಾಡಲಾಗಿದೆ? | |
| 23 | ದಸ್ತಾವೇಜು ನೋಂದಣಿ ಬಗ್ಗೆ ತೆಗೆದು ಕೊಂಡ ಸಮಯ | ಆಪರೇಟರ್‌ರವರ ಕರ್ತವ್ಯ ಲೋಪದಿಂದಾಗಿ ದಸ್ತಾವೇಜು ನೋಂದಣಿಗಾಗಿ 30 ನಿಮಿಷಕ್ಕಿಂತ ಹೆಚ್ಚು ಸಮಯ ತೆಗೆದು ಕೊಂಡ ಪ್ರಕರಣಗಳ ಸಂಖ್ಯೆ | |
| 24 | Antivirus | Antivirus ತಂತ್ರಾಂಶವನ್ನು ಅಳವಡಿಸಿ ಅಪಡೇಟ್ ಮಾಡಲಾಗಿದೆಯೆ? | |
| 25 | ದೂರವಾಣಿ ವೆಚ್ಚ ಪಾವತಿ | ದೂರವಾಣಿ ವೆಚ್ಚವನ್ನು ಮೆ||CMS / ECIL ರವರು ಪ್ರತಿ ತಿಂಗಳು BSNL ರವರಿಗೆ ಪಾವತಿಸುವಲ್ಲಿ ವಿಳಂಬವಾದುದಕ್ಕೆ ದೂರವಾಣಿ ಸ್ಥಗಿತವಾಗಿದೆಯೇ? | |
| 26 | XML ಜೆ-ಫಾರ್ಮಗಳ ರವಾನೆ | ಕಾವೇರಿಯಿಂದ ಭೂಮಿಗೆ XML ಜೆ-ಫಾರ್ಮಗಳನ್ನು ವಿದ್ಯುನ್ಮಾನ ದ್ವಾರಾ ದಿನನಿತ್ಯ ರವಾನಿಸಲಾಗಿತ್ತಿದೆಯೆ? | |

ದಿನಾಂಕ:................

ಉಪ-ನೋಂದಣಾಧಿಕಾರಿ/ಜಿಲ್ಲಾ ನೋಂದಣಾಧಿಕಾರಿ

.............................

(ಕಛೇರಿ ಮೊಹರು)